Commissioner ; 272 acres are under preliminary enquiry. You will see, out of 656 acres required to complete this programme, the bulk of it is either under preliminary notification or under final notification 308 acres in Chickodi is a part of the programme.

ಶ್ರೀ ಪಿ.ಪಿ. ಹೆಗಡೆ.— ಬೆಳಗಾಂ ಜಿಲ್ಲೆಯಲ್ಲಿ ೧೯೭೪-೭೫ರಲ್ಲಿ ಬಡಜನರಿಗೆ ಎಷ್ಟು ನಿವೇಶನಗಳನ್ನು ಹಂಚಿದ್ದೀರಿ, ಆ ಪೈಕಿ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ಗೆ ಎಷ್ಟು? ಅದೇ ರೀತಿ ೧೯೭೫-೭೬ರಲ್ಲಿ ಎಷ್ಟು ನಿವೇಶನಗಳನ್ನು ಹಂಚುತ್ತೀರಿ ? ಅದರಲ್ಲಿ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ಗೆ ಎಷ್ಟು ಕೊಡಬೇಕೆಂದು ಯೋಚಿಸಿದ್ದೀರಿ ?

ಶ್ರೀ ಎಂ.ವೈ. ಘೋರ್ಪಡೆ.— ಆ ಸಮಾಚಾರವನ್ನು ಕೊಡುತ್ತೇನೆ. ಹಳೆಯ ವರ್ಷದ ಬ್ರೇಕ್ ಆಫ್ ಬೇಕಾದರೆ ತರಿಸಿಕೊಡುತ್ತೇನೆ.

T.A.P.C.M.S. Ltd., Koratagere Taluk

34 SRI MUDDURAMAIAH (Koratagere) will the Minister for Co-operation be pleased to state:—

(*a*) When the Administrator was appointed to the TAPCMS Ltd., Koratagere Taluk;

(*b*) What is the misappropriated amount before the appointment of the Administrator;

(*c*) Whether the accounts of the TAPCMS Ltd., were audited during the period the TAPCMS Ltd., was under the Administrator and if so, the results of the audit?

SRI K.H RANGANATH (Minister for Co-operation).—

(*a*) 7th March 1972

(*b*) Rs 32,851-62 as per audit report 1970-71.

(*c*) No.

ಶ್ರೀ ಮುದ್ದುರಾಮಯ್ಯ.—ಸ್ವಾಮಿ, 1970-71ನೇ ಸಾಲಿನವರೆಗೆ ಮಾತ್ರ ಆಡಿಟ್ ಆಗಿದೆ. ಅಲ್ಲಿಂದ ಈಚೆಗೆ 5 ವರ್ಷದ ಆಡಿಟ್ ಮಾಡದೆ ಇರುವುದಕ್ಕೆ ಕಾರಣವೇನು ?

ಶ್ರೀ ಕೆ. ಪೆಚ್. ರಂಗನಾಥ್.—ಇತ್ತೀಚೆಗೆ ಆಡಿಟ್ ಆಗದೇ ಇರುವುದಕ್ಕೆ ಕಾರಣ ಏನೆಂದರೆ ಕ್ರಿಮಿನಲ್ ಕೇಸ್ ಆಗಿ ಪುಸ್ತಕಗಳು ಕೋರ್ಟಿನಲ್ಲಿರುವುದರಿಂದ ಪುನ್ಃ ಪುಸ್ತಕಗಳನ್ನು ತೆಗೆದುಕೊಳ್ಳದೆ ಆಡಿಟ್ ಮಾಡಲಿಕ್ಕೆ ಸಾಧ್ಯವಾಗಿಲ್ಲ.

ಶ್ರೀ ಮುದ್ದುರಾಮಯ್ಯ.—ತಾತ್ಕಾಲಿಕವಾಗಿ 1974-75ನೇ ಸಾಲಿನ ಜಮಾ ಖರ್ಚು ಮಾಡಿದ ಪ್ರಕಾರ ಎರಡೂವರೆ ಲಕ್ಷ ರೂಪಾಯಿ ಸಹಕಾರ ಸಂಘದಲ್ಲಿ ದುರುಪಯೋಗವಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪೆಚ್. ರಂಗನಾಥ್.—ಈ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಮುದ್ದುರಾಮಯ್ಯ.—ಆದಷ್ಟು ಬೇಗ್ಗನೆ ಆಡಿಟ್ ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಜರುಗಿಸಿ ವ್ಯವಹಾರವನ್ನು ಸರಿಪಡಿಸುತ್ತೀರಾ ?

ಶ್ರೀ ಕೆ. ಪೆಚ್. ರಂಗನಾಥ್.—ಸರಿಪಡಿಸಲಾಗುವುದು.

ಶ್ರೀ ಕೆ. ವೆಂಕಟಪ್ಪ.—ಪ್ರತಿಯೊಂದು ಸೊಸೈಟಿಯಲ್ಲೂ ಆಡಿಟ್ ಆಗುವುದು ನಿಧಾನವಾಗುತ್ತಿದೆ. ಇದಕ್ಕೆ ಕಾರಣ ಏನು ? ಇದರ ಬಗ್ಗೆ ವಿಚಾರ ಮಾಡಿ ಪ್ರತಿಯೊಂದು ಸೊಸೈಟಿಯೂ ತ್ವರಿತವಾಗಿ ಆಡಿಟ್ ಆಗುವಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ಆಡಿಟ್ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಆಡಿಟ್ ವಿಭಾಗವನ್ನು ಪ್ರತ್ಯೇಕ ಮಾಡಿ ಜಾಸ್ತಿ ಸೊಸೈಟಿಗಳನ್ನು ಆಡಿಟ್ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಐದು ವರ್ಷಗಳಾದರೂ ಆಡಿಟ್ ಮಾಡುವುದಕ್ಕೆ ಅಗಿಲ್ಲ, ರೆಕಾರ್ಡ್ ಕ್ರಿಮಿನಲ್ ಕೇಸ್ ಆಗಿ ಕೋರ್ಟಿನಲ್ಲಿದೆ ಎಂದು ಹೇಳುತ್ತೀರಿ. ಕೇಸ್ ಪೂರೈಸಿ ಆಡಿಟ್ ಮಾಡಿ ಸಂಬಂಧಪಟ್ಟ ಜನರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಬಹಳ ಕಾಲವಾದರೆ ಚ್ಯೆಂ ಬಾರ್ ಆದರೆ ಏನು ಮಾಡುತ್ತೀರಿ ?

ಶ್ರೀ ಕೆ. ಹೆಚ್. ರಂಗನಾಥ್.—ಈ ಕೇಸು 1970-71ಕ್ಕೆ ಸಂಬಂಧಪಟ್ಟಂಥದ್ದು. ಆಡಿಟ್ ಅಬ್ಜೆಕ್ಷನ್ಸ್, ಮಿಸ್ ಅಪ್ರೊಪ್ರಿಯೇಷನ್‌ಗಳ ಬಗ್ಗೆ ಅಗಿರತಕ್ಕದ್ದು, ಇದು ಮ್ಯಾಜಿಸ್ಟ್ರೇಟ್‌ಕೋರ್ಟಿನಲ್ಲಿ ಕನ್‌ವಿಕ್ಷನ್ಸ್ ಆಗಿಸೆಷನ್‌ಕೋರ್ಟಿನಲ್ಲಿ ಅಪೀಲ್‌ನಲ್ಲಿದೆ. ಆದು ತೀರ್ಮಾನವಾಗುವವರೆಗೆ ಪುಸ್ತಕ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಕೋರ್ಟಿನವರು ಅಧಿಕಾರಿಗಳಿಗೆ ಬರೆದಿರುವುದರಿಂದ ತಡವಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ಮಾನ್ಯ ಸದಸ್ಯರು ಹೇಳಿದ ಹಾಗೆ 2 ಲಕ್ಷ ರೂಪಾಯಿ ಆಗಲಿ, ಒಂದು ಲಕ್ಷ ರೂಪಾಯಿ ಆಗಲಿ ಒಂದೇ. ಇದು ಒಂದೆರಡು ವರ್ಷಗಳಿಂದ ಬರುತ್ತಿರುತ್ತದೆ, ಇದನ್ನು ಮೇಲ್ಮಟ್ಟದ ಅಧಿಕಾರಿಗಳ ತನಿಖೆ ಮಾಡಿ ವರದಿ ಮಾಡಿಲ್ಲವೆ ? ದುರುಪಯೋಗಕ್ಕೆ ಸಂಬಂಧಪಟ್ಟ ಕೇಸುಗಳು ಎಷ್ಟಿವೆ ಎಂದು ದಯವಿಟ್ಟು ತಿಳಿಸಿ.

MADAM SPEAKER.—That is a hypothetical question.

ಶ್ರೀ ಕೆ. ಹೆಚ್. ಹನುಮೇಗೌಡ.—ಸೊಸೈಟಿಗಳಲ್ಲಿ ಹಣ ದುರುಪಯೋಗವಾದರೆ ಸಾಮಾನ್ಯವಾಗಿ ಮೊದಲು ಕ್ರಿಮಿನಲ್ ಕೇಸ್ ಹಾಕುತ್ತಾರೆ. ಇಂಥ ಕೇಸುಗಳು ನೂರಕ್ಕೆ 90 ರಷ್ಟು ವಜಾ ಆಗುತ್ತವೆ. ಈ ರೀತಿ ವಜಾ ಆದಾಗ ಸೊಸೈಟಿಗೆ ದುಡ್ಡು ಹೋಗುತ್ತದೆ, ಅದನ್ನು ಪಾರ್ಟಿಯಿಂದ ಯಾವ ರೀತಿ ವಸೂಲು ಮಾಡುತ್ತೀರಿ.

ಶ್ರೀ ಕೆ. ಹೆಚ್. ರಂಗನಾಥ್.—ತಿದ್ದುಪಡಿ ಆಗಿರುವ ಕಾನೂನು ಪ್ರಕಾರ ಈ ರೀತಿ ತೊಂದರೆ ಆಗಲಿಕ್ಕೆ ಸಾಧ್ಯವಿಲ್ಲ. ಆಡಿಟ್ ಮಾಡಿ ಗೊತ್ತಾದ ತಕ್ಷಣ ನೇರವಾಗಿ ಸಿವಿಲ್ ಸೂಟ್ ಹಾಕಿ ವಸೂಲು ಮಾಡುವುದಕ್ಕೆ ತಿದ್ದುಪಡಿ ಆಗಿದೆ.

ಶ್ರೀ ಹೆಚ್ ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಪ್ರಶ್ನೆ ಕೇಳುತ್ತಾ ಹೆಚ್ಚು ಹಣ ದುರುಪಯೋಗವಾಗಿದೆ, ಕ್ರಿಮಿನಲ್ ಕೇಸ್ ಆಗಿದೆ ಎಂದು ಆಪಾದನೆ ಮಾಡಿದರೂ ತಾವು ಉತ್ತರ ಕೊಡುತ್ತಾ ಸಂಬಂಧಪಟ್ಟ ಕಾಗದ ಪತ್ರಗಳು ಕೋರ್ಟಿನಲ್ಲಿರುವುದರಿಂದ ಜವಾಬ್ದಾರಿ ಗೊತ್ತು ಮಾಡುವುದು ಕಷ್ಟವಾಗಿದೆ ಎಂದು ಹೇಳಿದಿರಿ. ಆದರೆ ಕೋರ್ಟಿನಲ್ಲಿರತಕ್ಕ ದಾಖಲೆಗಳನ್ನು ತೆಗೆದುಕೊಂಡು ಯಾರ ಮೇಲೆ ಎಷ್ಟು ಹೊಣೆಗಾರಿಕೆ ಇದೆ ಎಂಬುದನ್ನು ಗೊತ್ತು ಮಾಡಬಹುದು.

ಅಧ್ಯಕ್ಷರು.—ಅಪೀಲಿನಲ್ಲಿ ಇದೆಯೆಂದು ಹೇಳಿದರು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಇದ್ದರೂ ಕೂಡ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ಕೆ. ಹೆಚ್. ರಂಗನಾಥ್.—32 ಸಾವಿರ ರೂಪಾಯಿಗಳ ಮಿಸ್ ಅಪ್ರೊಪ್ರಿಯೇಷನ್ ಇದು. ಒಬ್ಬ ಕ್ಲಾರ್ಕ್ ಮೇಲೆ 4 ಸಾವಿರ ರೂಪಾಯಿಗಳಿಗೆ ಕೇಸ್ ಆಗಿ ಕೋರ್ಟಿನಲ್ಲಿರುವುದರಿಂದ ಎಲ್ಲ ರೆಕಾರ್ಡ್‌ಗಳು ಕೊರ್ಟಿನಲ್ಲಿ ಪೆಂಡಿಂಗ್ ಇವೆ. ಬಾಕಿಯವರಿಂದ 9 ಸಾವಿರ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಎಲ್ಲಾ ರೆಕಾರ್ಡ್‌ಗಳು ಕೋರ್ಟಿನಲ್ಲಿರುವುದರಿಂದ ಆಡಿಟ್ ಮಾಡುವುದಕ್ಕೆ ಆಗಲಿಲ್ಲ.

ಅಧ್ಯಕ್ಷರು.— ಇಲ್ಲಿಗೆ ಪ್ರಶ್ನೋತ್ತರಗಳು ಮುಗಿದವು.